ದಿನಾಂಕ: 11.11.2024　ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು　ವಾದಿಗಳ ಪರ ಶ್ರೀ　ಡಿಜಿ ಜಿ ವಕೀಲರಿಂದಃ**

ನಾನು ವಾಟರ್ ಟ್ಯಾಂಕ್ ರಸ್ತೆಯ ಮನೆಯಲ್ಲಿ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದೇನೆ. 15 ವರ್ಷಗಳಿಂದ ನಾನು ಅಲ್ಲಿಯೇ ಬ್ಯೂಟಿ ಪಾರ್ಲರ್ ನಡೆಸುತ್ತಿದೇನೆ. ಈ ದಾವೆಯನ್ನು ಯಾರು ಯಾರ ಮೇಲೆ ಸಲ್ಲಿಸಿದ್ದಾರೆ ಎಂದು ಗೊತ್ತು. ಈ ದಾವೆಯನ್ನು ಸ್ವಾಮಿಯಪ್ಪ ನವರು ನಮ್ಮ ಮನೆಯ ಮಾಲೀಕರಾದ ಕವಿತ ರವರ ಮೇಲೆ ಸಲ್ಲಿಸಿರುತ್ತಾರೆ. ನಾವು ಇರುವ ಮನೆಯ ಮೇಲೆ ಕೇಸನ್ನು ಹಾಕಿರುತ್ತಾರೆ. ಕರಾರಿನಲ್ಲಿ ಭೋಗ್ಯಕ್ಕೆ ಇರುವ ವಿಚಾರ ಬರೆದಿರುತ್ತದೆ. ಲೀಜ್ ಅಗ್ರಿಮೆಂಟಿನಲ್ಲಿ ಮನೆಯ ಚಕ್ಕು ಬಂದಿ ಮನೆಯ ವಿಸ್ತೀರ್ಣ, ಮನೆಯ ಖಾತೆ ನಂಬರ್ ಬರೆಯಲಾಗಿದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. 2010 ರಲ್ಲಿ ನಾನು ಆ ಮನೆಯನ್ನು ಲೀಜ್ ಗೆ ಹಾಕಿಸಿಕೊಂಡು ಲೀಜ್ ಅಗ್ರಿಮೆಂಟ್ ಬರೆಸಿಕೊಂಡಿರುತ್ತೇನೆ. ಖಾತೆ ನಂಬರ್ 439 ಆಗಿರುತ್ತದೆ ಅದರ ಮುಂದೆ ಸಹ ನಂಬರ್ ಇದ್ದು ಅದರ ನಂಬರ್ ನೆನಪಿಲ್ಲ.

ಪೂರ್ವಕ್ಕೆ ರಾಮಣ್ಣ ಎನ್ನುವವರ ಜಾಗ ಇದ್ದು ಈಗ ಬೇರೆಯವರು ಮನೆ ಕಟ್ಟಿಕೊಂಡಿದ್ದಾರೆ ಪಶ್ಚಿಮಕ್ಕೆ ವಾಟರ ಟ್ಯಾಂಕ್ ರಸ್ತೆ, ಉತ್ತರಕ್ಕೆ ಮುನ್ಸಿಪಲ್ ರಸ್ತೆ, ದಕ್ಷಿಣಕ್ಕೆ ಪಿಗ್ಮಿ ಕಲೆಕ್ಟರ್ ರವರ ಮನೆ ಇದೆ ಅವರ ಹೆಸರು ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರು ಹಣಖಾಸಿನ ವ್ಯವಹಾರದ ಬಗ್ಗೆ ನಿಮಗೆ ಏನುಗೊತ್ತು ಎಂದರೆ ಸಾಕ್ಷಿ ನಮ್ಮ ಮನೆಗೆ ಬಂದು ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ. ಪತ್ರ ಬರೆದುಕೊಳ್ಳಲು ಮನೆಯಿಂದ ಹೊರಗೆ ಹೋಗುತ್ತಿದ್ದರು. ನಾನು ಯಾವ ಪತ್ರಕ್ಕೂ ಸಹಿ ಮಾಡಿಲ್ಲ. 2013 ರಕ್ಕೆ ಪತ್ರ ಬರೆದುಕೊಂಡಿರುತ್ತಾರೆ ಆದರೆ ಯಾವ ಕಾರಣಕ್ಕೆ ಬರೆದುಕೊಳ್ಳುತ್ತಿದ್ದರು ಏನು ಬರೆದುಕೊಳ್ಳುತ್ತಿದ್ದರು ಎಂದುಗೊತ್ತಿಲ್ಲ. ಬಡ್ಡಿಗೆ ಹಣ ಪಡೆದುಕೊಂಡು ವಾಪಸ್ಸು ಕೊಡುತ್ತಿದ್ದರು.

ನನ್ನ ಎದುರು ಯಾವುದೇ ಪತ್ರ ಬರವಣಿಗೆ ಆಗಿಲ್ಲ ಆದ್ದರಿಂದ ವಾದಿ ಮತ್ತು ಪ್ರತಿವಾದಿಗಳ ಪತ್ರಗಳ ಬಗ್ಗೆ ವಯುಕ್ತಿಕ ಮಾಹಿತಿ ಇಲ್ಲ ಆ ಪತ್ರಗಳಲ್ಲಿ ಏನು ಬರೆಯುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಏನೆಲ್ಲಾ ವ್ಯವಹಾರ ಆಯಿತು ಎಂಬ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಹಣ ಪಡೆದುಕೊಂಡು ಹಿಂದೆ ಕೊಡುತ್ತಿದ್ದ ವಿಚಾರ ಮಾತ್ರ ನನಗೆ ಗೊತ್ತು ಪತ್ರಗಳಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕರಾರಿನ ಬಗ್ಗೆ ನಾನು ಏನು ಬರೆಸಿರುವುದಿಲ್ಲ

ನಾನು 2015 ರಲ್ಲಿ ಭೋಗ್ಯದ ಹಣ ಹೆಚ್ಚಾದಾಗ ಇನ್ನೊಂದು ಕರಾರು ಮಾಡಿಸಿಕೊಂಡಿರುತ್ತೇನೆ. ನ್ಯಾಯಾಲಯದಲ್ಲಿ ಕೇಸ್ ಇರುವಾಗ ಅಗ್ರಿಮೆಂಟ್ ಮಾಡಿಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ 2010 ರ ಅಗ್ರಿಮೆಂಟನ್ನೇ ಮುಂದುವರೆಸಿಕೊಂಡು ಬಂದಿದ್ದೇನೆ ಎಂದು ನುಡಿಯುತ್ತಾರೆ. 2013 ರಲ್ಲಿ ಸಾಲ ಪಡೆದುಕೊಂಡು 2015 ರಲ್ಲಿ ಪಾವತಿಸಿದ ವಿಚಾರ ಗೊತ್ತು ಉಳಿದ ವಿಚಾರ ನನಗೆ ಗೊತ್ತಿಲ್ಲ. ಕವಿತ ನನಗೆ ಸಂಬಂಧಿಕರಲ್ಲ. ಅವರು ನಮ್ಮ ಮನೆ ಓನರ್. ನನ್ನ ಸಮಕ್ಷಮ ವಾದಿಗಳು ಮತ್ತು ಪ್ರತಿವಾದಿಗಳು ಯಾವುದೇ ಕರಾರು ಮಾಡಿಕೊಳ್ಳದಿದ್ದರೂ ಪ್ರಲೋಭನೆಗೆ ಒಳಗಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನಮುಖ್ಯ ವಿಚಾರಣೆಯಲ್ಲಿ 2 ಬಾರಿ ಸಾಲ ಪಡೆದು ಮನೆಯನ್ನು ಭದ್ರತೆಗಾಗಿ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2015 ರಲ್ಲಿ ಜನವರಿಯಲ್ಲಿ ಪ್ರತಿವಾದಿಯವರು ವಾದಿಗೆ ಹಣ ಕೊಟ್ಟಿರುತ್ತಾರೆ. ವಾದಿಗೆ ಅಸಲು ಮತ್ತು ಬಡ್ಡಿ ಎರಡನ್ನು ಕೊಟ್ಟಿರುತ್ತಾರೆ. 2015 ರಲ್ಲಿ ಕೇಸ್ ಚಾಲ್ತಿಯಲ್ಲಿದ್ದಾಗ ಹಣವನ್ನು ನ್ಯಾಯಾಲಯದಲ್ಲಿಕೊಡಬಹುದಿತ್ತು ಮನೆಯಲ್ಲಿ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇಸನ್ನು ವಜಾ ಮಾಡಿಸಿಕೊಳ್ಳುತ್ತೇನೆ ಎಂದು ವಾದಿಯು ಹೇಳಿ ಹಣ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಹಣ ಕೊಟ್ಟ ಬಗ್ಗೆ

ರಶೀದಿ ಕೇಳಿದರು ಆದರೆ ಬರೆದುಕೊಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವ್ಯವಾಹರ ಆಗಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

21.04.2014 ರಂದು ಪ್ರತಿವಾದಿಯವರು ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ವಾದಿಯಿಂದ ರೂ.5 ಲಕ್ಷ ಹಣ ಪಡೆದುಕೊಂಡು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಪ್ರತಿವಾದಿಯು ಕರಾರನ್ನು ಬರೆದುಕೊಟ್ಟಿಲ್ಲ ಕ್ರಯದ ಕರಾರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ ರೂ.5 ಲಕ್ಷ ಸಾಲ ಮತ್ತು ರೂ.33 ಸಾವಿರ ಬಡ್ಡಿಯನ್ನು ಅಸಲು ಬಡ್ಡಿ ಸೇರಿಸಿ ಪ್ರತಿವಾದಿಯು ವಾದಿಗೆ ಕೊಟ್ಟಿದ್ದಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸ್ವಾಮಿಯಪ್ಪನನ್ನು ನೋಡಿಲ್ಲ ಅವರ ಪರಿಚಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಮನೆಯಲ್ಲಿ ಲೀಜ್ ಗೆ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. 21.04.2014 ರ ಕ್ರಯದ ಕರಾರು ಪತ್ರವನ್ನು ರದ್ದಾಯಿತಿ ಮಾಡಿಕೊಡಿ ಎಂದು ಪ್ರತಿವಾದಿ ವಾದಿಗೆ ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿ ಬಳಿ ಕ್ರಯದ ಕಾರಾರಿನಂತೆ ಕ್ರಯ ಪತ್ರ ಮಾಡಿಕೊಂಡ ವಿಚಾರ ನಿಮಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಕ್ರಯದ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ ನಾನು ಕವಿತಾರವರ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಹೇಳಿದಂತೆನಾನು ಪ್ರಮಾಣ ಪತ್ರ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಿರಿಯೂರಿನ ವಾಸಿ ಅಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿ ನೀಡಿದ ಮಾಹಿತಿಯಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು